ಓ ಎಸ್ 219-2012
ಡಿ ಡಬ್ಲ್ಯೂ-1 ಶ್ಯಾಮ ಭಟ್

**ದಿನಾಂಕ 20.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

ಮುಂದುವರಿದ ಪಾಟೀ ಸವಾಲು : ವಾದಿ ಪರ ಕೆ ವಿ ಬಿ ವಕೀಲರಿಂದ

4. ವಾದಿ ನಂ 1 ಎ ಕೃಷ್ಣ ಭಟ್ ಇವರು ನನ್ನ ತಂದೆಯ ಎರಡನೇ ಹೆಂಡತಿಯ ದೊಡ್ಡ ಮಗ ಎಂದರೆ ಸರಿ . ನಾನು ಡಿಗ್ರಿಯಲ್ಲಿ ವ್ಯಾಸಂಗ ಮಾಡುತ್ತಿರುವಾಗ ವಾದಿ ನಂ 1 ಎ ಕೃಷ್ಣ ಭಟ್ ಇವರು ಉದ್ಯೋಗದಲ್ಲಿ ಇದ್ದರು ಎಂದರೆ ಸಾಕ್ಷಿಯು ನನಗೆ ಈಗ ಸರಿ ನೆನಪಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರಿದು ನಾನು ಬಿ ಎಸ್ ಇ ಮಾಡಿರಬಹುದು ಎನ್ನುತ್ತಾರೆ . ವಾದಿ ನಂ 1 ಎ ಕೃಷ್ಣ ಭಟ್ ಪ್ರಥಮವಾಗಿ ಎಮ್ ಜಿ ಎಮ್ ಕಾಲೇಜಿನಲ್ಲಿ ಟ್ಯುಟರ್ ಆಗಿ ಕೆಲಸ ಮಾಡುತ್ತಿದ್ದರು . ನಾನು 1959 ರಲ್ಲಿ ವಾದಿ ನಂ 1 ಎ ಕೃಷ್ಣ ಭಟ್ ರವರು ಕೆಲಸಕ್ಕೆ ಸೇರಿದಾಗ ವಿದ್ಯಾಭ್ಯಾಸ ಮಾಡುತ್ತಿದ್ದೆ . ತದ ನಂತರ 1961 ನೇ ಇಸ್ವಿಯಲ್ಲಿ ವಾದಿ ನಂ 1 ಎ ಕೃಷ್ಣ ಭಟ್ ಇವರು ಪುತ್ತೂರಿನ ಸೆಂಟ್ ಪಿಲೋಮಿನಾ ಕಾಲೆಜೀನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದರು . ಅವರು ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿರುವಾಗ ವಾದಿ ನಂ 1 ಎ ಕೃಷ್ಣ ಭಟ್ ಇವರು ಪುತ್ತೂರಿನಲ್ಲಿ ಬಾಡಿಗೆ ಮನೆಯನ್ನು ಮಾಡಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ . ಪುತ್ತೂರಿನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿರುವಾಗ ಅವರು ಎಲ್ಲಿಂದ ಹೋಗಿ ಬರುತ್ತಿದ್ದರು ಎಂದು ನನಗೆ ಗೊತ್ತಿಲ್ಲ . ನನ್ನ ಅಣ್ಣನ ಜೊತೆ ಪ್ರತಿವಾದಿ ನಂ 4 ಇವರು ಕಾನ್‌ಮೆಂಟ್ ಶಾಲೆಗೆ ಹೋಗುತ್ತಿದ್ದರು ಎಂದರೆ ಸರಿ . ಆ ಸಂದರ್ಭದಲ್ಲಿ ನನ್ನ ತಂದೆಯು ಅಡ್ಯನಡಕದಲ್ಲಿ ವಾಸವಗಿದ್ದರು . 1964 ರಲ್ಲಿ ನನ್ನ ಅಣ್ಣ ವಾದಿ ನಂ 1 ಎ ಕೃಷ್ಣ ಭಟ್ ಇವರು ಮುಲ್ಕಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇರಿದ್ದರು ಎಂದರೆ ಸರಿ . ನನ್ನ ಅಣ್ಣ ಆ ಸಮಯದಲ್ಲಿ ಮುಲ್ಕಿಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿದ್ದರು ಎಂದರೆ ಸಾಕ್ಷಿಯು ಆಗ ನಾನು ಇಲ್ಲಿ ಇರಲಿಲ್ಲ ನಾನು ಮೈಸೂರಿನಲ್ಲಿ ಎಮ್ ಎಸ್ ಸಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದೆ ಎನ್ನುತ್ತಾರೆ . ನನ್ನ ಎಮ್ ಎಸ್ ಸಿ ವಿದ್ಯಾಭ್ಯಾಸವನ್ನು 1966 ರಲ್ಲಿ ಮುಗಿಸಿರುತ್ತೇನೆ . ನಂತರ ನಾನು ಮುಲ್ಕಿಯ ವಿಜಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನೇಮಕವಾಗಿದ್ದೇನು . ನಾನು ಮುಲ್ಕಿಯ ವಿಜಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದೆ . ಆದರೆ, ನನಗೆ ಖಾಯಂ ಆಗಿರಲಿಲ್ಲ . ನನಗೆ ಮುಲ್ಕಿ ಕಾಲೇಜಿನಲ್ಲಿ ಪ್ರತಿ ತಿಂಗಳಿಗೆ ರೂ 300 ವೇತನ ಬರುತ್ತಿತ್ತು . ನಾನು ಮುಲ್ಕಿ

ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕೆಲಸಕ್ಕೆ ಸೇರಿದಾಗ ನಾನು ಮತ್ತು ನನ್ನ ಅಣ್ಣ ಎ ಕೃಷ್ಣ ಭಟ್ ವಾದಿ ನಂ 1 ಮತ್ತು ಇತರರ ಇಬ್ಬರು ಉಪನ್ಯಾಸಕರು ಸೇರಿಕೊಂಡು ಬಾಡಿಗೆ ಮನೆಯನ್ನು ಮಾಡಿದ್ದೇವು . ಸದ್ರಿ ಸಂಬಳದಿಂದ ಖರ್ಚು ಆಗಿ ನಮಗೆ ಉಳಿತಾಯ ಆಗುತ್ತಿತ್ತು . ನಮಗೆ ರೂ 200 ತಿಂಗಳಿಗೆ ಉಳಿತಾಯ ಆಗುತ್ತಿತ್ತು . ಉಳಿತಾಯವಾದ ಹಣವನ್ನು ನಾನು ಬ್ಯಾಂಕಿನಲ್ಲಿ ಇಡುತ್ತಿದ್ದೇನು . ನನ್ನ ಮದುವೆಯು 1970 ನೇ ಇಸ್ವಿಯಲ್ಲಿ ಆಗಿರುತ್ತದೆ . ನನ್ನ ಮದುವೆಗೆ ನನ್ನ ಅಣ್ಣ - ತಮ್ಮಂದಿರಾಗಲಿ , ಬೇರೆಯವರಾಗಲಿ ಯಾರು ಹಣವನ್ನು ಕೊಟ್ಟಿರಲಿಲ್ಲ . ಆವಾಗ ನನ್ನ ಮದುವೆಗೆ ರೂ 3000/- ಖರ್ಚು ಆಗಿರುತ್ತದೆ . ಸದ್ರಿ ರೂ 3000/- ಹಣವನ್ನು ನನ್ನ ಮದುವೆಗೆ ನಾನು ಕೆಲಸ ಮಾಡುತ್ತಿದ್ದ ವೇತನದಿಂದ ಬ್ಯಾಂಕಿನಿಂದ ತಂದಿಟ್ಟ ಹಣ ಉಪಯೋಗ ಮಾಡಿದ್ದೇನು . ನನಗೆ ವೇತನ ಬರುತ್ತಿದ್ದ ವೇತನ ರಶೀದಿ ನನ್ನ ಹತ್ತಿರ ಇಲ್ಲ ಆದ್ದರಿಂದ ಅದನ್ನು ಹಾಜರು ಪಡಿಸಲು ಸಾಧ್ಯವಿಲ್ಲ . ನಾನು ಹೇಳಿದಂತೆ ನನಗೆ ವೇತನ ಬರುತ್ತಿರಲ್ಲಿ , ವೇತನದಿಂದ ಹಣವನ್ನು ಬ್ಯಾಂಕಿನಲ್ಲಿ ಕೂಡಿಟ್ಟಿರಲಿಲ್ಲ , ಸದ್ರಿ ಹಣದಿಂದ ನನ್ನ ಮದುವೆ ಆಗಿಲ್ಲ ಮತ್ತು ನನ್ನ ಮದುವೆಯು ಜಂಟಿ ಕುಟುಂಬದ ಆದಾಯದಿಂದ ಆಗಿರುತ್ತದೆ ಎಂದರೆ ಸರಿಯಲ್ಲ . ನನ್ನ ಉನ್ನತ ಶಿಕ್ಷಣ ಮತ್ತು ನನ್ನ ಮದುವೆಯ ಖರ್ಚು ವೆಚ್ಚಗಳನ್ನು ನನ್ನ ಅಣ್ಣ ವಾದಿ ನಂ 1 ಎ ಕೃಷ್ಣ ಭಟ್ ಇವರು ತಮ್ಮ ಸ್ವಂತ ಖರ್ಚಿನಿಂದ ಮಾಡಿದ್ದರು ಎಂದರೆ ಸರಿಯಲ್ಲ .

5. ಪ್ರತಿವಾದಿ ನಂ 1 ಎ ನರಸಿಂಹ ಭಟ್ ಇವರು ಶಿಕ್ಷಕರಾಗಿದ್ದರು ಎಂದರೆ ಸರಿ . ಪ್ರತಿವಾದಿ ನಂ 1 ಎ ನರಸಿಂಹ ಭಟ್ ಮತ್ತು ವಾದಿ ನಂ 1 ಎ ಕೃಷ್ಣ ಭಟ್ ಇವರು ತಮ್ಮ ಆದಾಯದಿಂದ ಬಂದ ಹಣವನ್ನು ನಮ್ಮ ಕುಟುಂಬಕ್ಕೆ ಉಪಯೋಗ ಮಾಡುತ್ತಿದ್ದರು ಎಂದರೆ ಸರಿಯಲ್ಲ . ನನ್ನ ತಂದೆಗೆ ನಮ್ಮ ವಿದ್ಯಾಭ್ಯಾಸ ಮತ್ತು ಕುಟುಂಬವನ್ನು ನಡೆಸುವ ತಾಕತ್ತು ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ . ನಾನು ಮತ್ತು ವಾದಿ ನಂ 1 ಎ ಕೃಷ್ಣ ಭಟ್ ಇವರು ಸೇರಿಕೊಂಡು ಕುಟುಂಬದ ಆಗು ಹೋಗುಗಳನ್ನು ನಾನು ಕೆಲಸಕ್ಕೆ ಸೇರಿದ ನಂತರ ಜೊತೆಯಾಗಿ ಮಾಡುತ್ತಿದ್ದೆವು ಎಂದರೆ ಸಾಕ್ಷಿಯು ನಾನು ಮಾತ್ರ ಖರ್ಚು ವೆಚ್ಚಗಳನ್ನು ಮಾಡುತ್ತಿದ್ದೆ ಆದರೆ ವಾದಿ ನಂ 1 ರವರು ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ .

ಓ ಎಸ್ 219-2012
ಡಿ ಡಬ್ಲ್ಯೂ-1 ಶ್ಯಾಮ ಭಟ್

6. ಅಡ್ಯನಡಕದಲ್ಲಿ ಸರಕಾರಿ ಜಮೀನಿನಲ್ಲಿ ಇರುವ ಮನೆ ನನ್ನ ತಂದೆಯ ಮನೆ . ಆ ಮನೆಗೆ ಸಂಬಂಧಿಸಿದಂತೆ ಕ್ಲೇಮ್ ಇದೆ ಎಂದರೆ ಸರಿ . ಸದ್ರಿ ಮನೆಗೆ ಸಂಬಂಧಿಸಿದಂತೆ ಎಷ್ಟು ವರ್ಷದಿಂದ ಕ್ಲೇಮ್ ಇತ್ತು ಎಂದು ನನಗೆ ಹೇಳಲಾಗುವುದಿಲ್ಲ . ಅಡ್ಯನಡಕದಲ್ಲಿ ಇರುವ ಮನೆಯನ್ನು ಯಾವಾಗ ಬಿಟ್ಟು ಕೊಟ್ಟಿದ್ದು ಎಂದು ನನಗೆ ಹೇಳಲಾಗುವುದಿಲ್ಲ ಆ ಸಮಯದಲ್ಲಿ ನಾನು ಮುಲ್ಕಿಯಲ್ಲಿ ಇದ್ದೆ . ಆಗ ನಾನು ಮುಲ್ಕಿಗೆ ಹೋಗಿ 2-3 ವರ್ಷಗಳು ಆಗಿದ್ದವು . ಅಡ್ಯನಡಕದಲ್ಲಿ ಇರುವ ಮನೆಯನ್ನು ಬಿಟ್ಟುಕೊಟ್ಟ ನಂತರ ನನ್ನ ತಂದೆ ತಾಯಿ ಮತ್ತು ವಾದಿ ನಂ 6 ಇವರು ದಾವಾ ಭೂಮಿಗೆ ಬಂದು ವಾಸವಾಗಿರುತ್ತಾರೆ . ಸಾಕ್ಷಿ ಮುಂದುವರಿದು ನಾನು ಅವರನ್ನು ಕರೆಯಲಿಲ್ಲ ಮತ್ತು ಯಾಕೆ ಬಂದಿರಿ ಎಂದು ನಾನು ಅವರನ್ನು ಕೇಳಲಿಲ್ಲ . ಸಾಕ್ಷಿ ಮುಂದುವರಿದು ಹೆತ್ತವರಾದ ಕಾರಣ ನಾನು ಕೇಳಲಿಲ್ಲ ಎನ್ನುತ್ತಾರೆ . ಅವರಿಗೆ ರೇಶನ್ ಕಾರ್ಡ್ ಇದ್ದ ಬಗ್ಗೆ ನನಗೆ ನೆನಪಿಲ್ಲ ಮತ್ತು ನಾನು ನೋಡಲಿಲ್ಲ ಎನ್ನುತ್ತಾರೆ . ದಾವಾ ಭೂಮಿಯಲ್ಲಿದ್ದ ಮನೆಗೆ ರೇಶನ್ ಕಾರ್ಡ್ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ . ನನ್ನ ಹೆಸರಿನಲ್ಲಿ ಕಾರ್ಕಳದಲ್ಲಿ ರೇಶನ್ ಕಾರ್ಡ್ ಇತ್ತು . ನಾನು ಅಲ್ಲಿಯೇ ವಾಸ್ತವ್ಯದಲ್ಲಿ ಇದ್ದ ಕಾರಣ ಅಲ್ಲಿಯೇ ರೇಶನ್ ಕಾರ್ಡ್ ಮಾಡಿಸಿರುತ್ತೇನೆ . ಇಲ್ಲಿ ರೇಶನ್ ಕಾರ್ಡ್ ಹೊಂದಿದ ಬಗ್ಗೆ ನಾನು, ನನ್ನ ಅಣ್ಣ ಮತ್ತು ಇತರರ ಸದಸ್ಯರ ಮೇಲೆ ದೂರನ್ನು ನೀಡಿಲ್ಲ . ದಾವಾ ಆಸ್ತಿಯಲ್ಲಿ ವಾಸಿಸುತ್ತಿದ್ದೇನೆಂದು ರೇಶನ್ ಕಾರ್ಡ್ ಬೇಕೆಂದು ನಾನು ಯಾವತ್ತೂ ಅರ್ಜಿಯನ್ನು ಕೊಟ್ಟಿಲ್ಲ .

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಬಂಟ್ವಾಳ,

ಓ ಎಸ್ 219-2012
ಡಿ ಡಬ್ಲ್ಯೂ-1 ಶ್ಯಾಮ ಭಟ್